## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **252** |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10.12.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅನುಸರಿಸುತ್ತಿರುವ ಗ್ರಾನೈಟ್, ಮಾರ್ಬಲ್, ಕಪ್ಪುಕಲ್ಲು, ಮರಳು, ಕೆಂಪು ಕಲ್ಲು ಮತ್ತು ಇತರೆ ಎಲ್ಲಾ ಗಣಿಗಾರಿಕೆ ಉತ್ಪನ್ನಗಳನ್ನು ಹಾಗೂ ಮಣ್ಣು ತೆಗೆಯುವ, ಸಾಗಾಟ ಹಾಗೂ ಮಾರಾಟದ ಬಗ್ಗೆ ಮತ್ತು ರಾಜಧನ ಕುರಿತು ಅನುಸರಿಸುತ್ತಿರುವ ನಿಯಮಗಳೇನು; | • ಉಪಖನಿಜಗಳ ಸಂಬಂಧ ರಾಜ್ಯದಲ್ಲಿ ಕಟ್ಟಡ ಕಲ್ಲು, ಅಲಂಕಾರಿಕ ಶಿಲೆ (Granite and their verities) ಮರಳು, ಲ್ಯಾಟರೈಟ್, ಕ್ಲೇ, ಮುರ್ರಂ, ಫುಲ್ಲರ್ಸ್ ಅರ್ಥ್ , ಶಹಬಾದ್ ಶಿಲೆ, ಸಿಲಿಕಾ ಸ್ಯಾಂಡ್ ಮತ್ತು ಇತ್ಯಾದಿ ಉಪಖನಿಜಗಳ ಗಣಿಗಾರಿಕೆಗಳು ನಡೆಯುತ್ತಿರುತ್ತವೆ.<br>• ಭಾರತ ಸರ್ಕಾರದ ಗಣಿ ಮತ್ತು ಖನಿಜ, (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ರ ಕಲಂ-15 ರಂತೆ ಆಯಾ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ, ನಿಯಂತ್ರಣ ಮತ್ತು ನಿರ್ವಹಣೆ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ನ್ನು ಜಾರಿಗೆ ತಂದಿದ್ದು, ಗ್ರಾನೈಟ್, ಕಪ್ಪುಕಲ್ಲು, ಮರಳು, ಕೆಂಪು ಕಲ್ಲು, ಇತ್ಯಾದಿ ಉಪಖನಿಜಗಳಿಗೆ ಸಂಬಂಧಿಸಿದಂತೆ ಸದರಿ ನಿಯಮಗಳನ್ನು ಅನ್ವಯಿಸಲಾಗುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಉಪಖನಿಜ ತೆಗೆಯಲು ಕಲ್ಲುಗಣಿ ಗುತ್ತಿಗೆ/ಲೈಸೆನ್ಸ್/ ಕಾರ್ಯಾದೇಶಗಳನ್ನು ಹೊಂದಿರುವ ವ್ಯಕ್ತಿ / ಸಂಸ್ಥೆ / ಕಂಪನಿಯವರು ಗುತ್ತಿಗೆ / ಪರವಾನಗಿ ಪಡೆದಿರುವ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಿ ಶೆಡ್ಯೂಲ್-II ರಲ್ಲಿ ನಿಗದಿಪಡಿಸಿರುವ ರಾಜಧನವನ್ನು ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿ, ಖನಿಜ ರವಾನೆ ಪರವಾನಗಿ ಪಡೆದು ಸ್ಥಳೀಯ ಬಳಕೆಗೆ, ಖನಿಜಾಧಾರಿತ ಕೈಗಾರಿಕೆಗಳಿಗೆ ಹಾಗೂ ವಿದೇಶಗಳಿಗೆ ಉಪಖನಿಜವನ್ನು ಸಾಗಾಣಿಕೆ/ರಫ್ತು ಮಾಡಲಾಗುತ್ತಿದೆ.<br>• ಉಪಖನಿಜಗಳ ಮಾರಾಟದ ಮೇಲೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ನಿಯಂತ್ರಣ ಇರುವುದಿಲ್ಲ. |

. . . 2

| | | |
|---|---|---|
| ಆ) | ಯಾವುದೇ ರಸ್ತೆ, ಕಾಲುವೆ, ವಿಮಾನ ನಿಲ್ದಾಣ ಹಾಗೂ ಇನ್ನಿತರ ಸಾರ್ವಜನಿಕ ಕಾಮಗಾರಿಗಳನ್ನು ನಡೆಸುವಾಗ ಲಭ್ಯವಾಗುವ ಕಲ್ಲು ಹಾಗೂ ಮಣ್ಣು ಸಹಿತ ಇನ್ನಿತರ ಯಾವುದೇ ಖನಿಜ ಇತ್ಯಾದಿಗಳನ್ನು ತೆಗೆಯಲು, ಕಾಮಗಾರಿಗೆ ಬಳಸಲು, ಅಥವಾ ಸಾಗಿಸಿ ಮಾರಾಟ ಮಾಡಲು ಅವಕಾಶವಿದೆಯೇ; ಹೀಗೆ ಲಭ್ಯವಾಗುವ ಕಲ್ಲು ಮಣ್ಣಿನ ಮೌಲ್ಯವನ್ನು ಗುತ್ತಿಗೆ ಪಾವತಿ ಬಿಲ್ಲಿನಲ್ಲಿ ಕಡಿತಗೊಳಿಸ ಲಾಗುತ್ತಿದೆಯೇ; | • ಮಾನ್ಯ ಸರ್ವೋಚ್ಚನ್ಯಾಯಾಲಯವು "State of Orissa V/s Union of India AIR 2001 SC 410 = (2001) 1 SCC 429 ಆದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಇಲ್ಲದ ಸಂದರ್ಭದಲ್ಲಿ ರಾಜಧನ ಪಾವತಿಸುವ ಬಗ್ಗೆ ನೀಡಿರುವ ತೀರ್ಪಿನ ಉಧೃತ ಭಾಗ ಈ ಕೆಳಕಂಡಂತಿದೆ.<br>"Railways extracting certain minor minerals like rock-cut soils and earth and utilizing them in laying down the railway track are bound to pay royalty for the mineral extracted and use by it when there was no quarrying lease and a permit under the Rules".<br>• ಅದರಂತೆ, ರಸ್ತೆ ಕಾಮಗಾರಿ ನಿರ್ಮಾಣ ಸಂದರ್ಭದಲ್ಲಿ ರಸ್ತೆ ಪಥದಲ್ಲಿ ದೊರೆಯುವ ಉಪಖನಿಜವನ್ನು ಕಾಮಗಾರಿ ಗುತ್ತಿಗೆದಾರರು ಅದೇ ಕಾಮಗಾರಿಗೆ ಬಳಸಿಕೊಳ್ಳಲು ಇಚ್ಚಿಸಿದಲ್ಲಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅನುಮತಿ ಪಡೆಯ ಬೇಕಾಗಿದ್ದು, ಬಳಸುವ ಉಪಖನಿಜದ ಪ್ರಮಾಣಕ್ಕೆ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ.<br>• ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಸ್ತೆ ಪಥದಲ್ಲಿ ದೊರೆಯುವ ಖನಿಜವನ್ನು ಅದೇ ಕಾಮಗಾರಿಗೆ ಬಳಸಿ ಕೊಳ್ಳಲು ಮಾತ್ರ ಅವಕಾಶವಿರುತ್ತದೆ. ಈ ರೀತಿ ಬಳಸಿಕೊಂಡ ಉಪಖನಿಜದ ಪ್ರಮಾಣಕ್ಕೆ ಕಾಮಗಾರಿ ನಿರ್ವಹಿಸುವ ಇಲಾಖೆ/ಸಂಸ್ಥೆಗಳು ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಕಟಾಯಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಬೇಕಾಗಿರುತ್ತದೆ. |
| ಇ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ಮತ್ತು ಹೆದ್ದಾರಿ ನಿರ್ಮಾಣ ಸಂದರ್ಭದಲ್ಲಿ ಲಭ್ಯವಾಗುವ ಕೆಂಪು ಕಲ್ಲು, ಮಣ್ಣನ್ನು ಮಾರಾಟ ಮಾಡಲು ನಿರ್ಬಂಧಿಸ ಲಾಗಿದೆಯೇ; ರಸ್ತೆ ಕಾಮಗಾರಿಯ ಸಂದರ್ಭ ದಲ್ಲಿ ತೆರವುಗೊಳಿಸಿದ ಮಣ್ಣನ್ನು ಅದೇ ಕಾಮಗಾರಿಗೆ ಬಳಸ ಲಾಗುತ್ತಿರುವ ಅಥವಾ ಮಾರಾಟ ಮಾಡುವ ಬಗ್ಗೆ ನಿಗಾವಹಿಸಲಾಗಿದೆಯೇ; | • ರಸ್ತೆ ನಿರ್ಮಾಣದಲ್ಲಿ ದೊರೆಯುವ ಉಪ ಖನಿಜವನ್ನು ಸದರಿ ರಸ್ತೆ ಕಾಮಗಾರಿಯಲ್ಲಿ ಬಳಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಿರ್ಮಾಣದಲ್ಲಿ ದೊರೆಯುವ ಉಪ ಖನಿಜವನ್ನು ಸದರಿ ಕಾಮಗಾರಿಗೆ ಮಾತ್ರ ಬಳಸಿಕೊಳ್ಳಲು ಕಾಮಗಾರಿ ಗುತ್ತಿಗೆದಾರರಿಗೆ ಅನುಮತಿ ನೀಡಲಾಗಿದ್ದು, ಈ ರೀತಿ ದೊರೆಯುವ ಉಪಖನಿಜವನ್ನು ಮಾರಾಟ ಮಾಡದಂತೆ ಷರತ್ತನ್ನು ವಿಧಿಸಲಾಗಿರುತ್ತದೆ.<br>• ರಸ್ತೆ ಕಾಮಗಾರಿ ನಡೆಯುವ ಸಂದರ್ಭದಲ್ಲಿ ದೊರೆಯುವ ಉಪ ಖನಿಜವನ್ನು ಸದರಿ ಕಾಮಗಾರಿ ಗಳಿಗೆ ಮಾತ್ರ ಬಳಸಲಾಗುತ್ತಿದ್ದು, ಈ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಆಗಿಂದಾಗ್ಗೆ ಪರಿಶೀಲಿಸಿ, ನಿಗಾ ವಹಿಸಲಾಗುತ್ತಿದೆ.<br>• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ಕಾಮಗಾರಿ ಗುತ್ತಿಗೆದಾರ ರುಗಳು ರಸ್ತೆ ಕಾಮಗಾರಿಗೆ ಬಳಸಿಕೊಂಡ ಉಪಖನಿಜಕ್ಕೆ ರಾಜಧನ ಮತ್ತು ಹೆಚ್ಚುವರಿ ಪಾವತಿಯನ್ನು ಸಂದಾಯ ಮಾಡಿದ್ದು, ವಿವರ ಕೆಳಕಂಡಂತಿದೆ: |

. . . 3

<table>
<tr>
<td></td>
<td></td>
<td>
<table>
<tr><th>Sl. No.</th><th>User ID/Name</th><th>Royalty/AP (in ₹)</th><th>MDP (in Tons)</th></tr>
<tr><td>1</td><td>DSKNSWP271/<br>Sri SM Authade</td><td>11,20,000</td><td>9227.5</td></tr>
<tr><td>2</td><td>DSKNSWP273/<br>M/s.Dilip Buildcon</td><td>16,80,000</td><td>18179.3</td></tr>
<tr><td>3</td><td>DSKNSWP284/<br>M/s.JNR Const. ltd</td><td>2,52,00,000</td><td>172915.37</td></tr>
<tr><td>4</td><td>DSKNSWP362/<br>M/s.Dilip Buildcon</td><td>72,80,000<br>(ಮುಂಗಡ ಜಮೆ)</td><td>-</td></tr>
</table>
</td>
</tr>
<tr>
<td>ಈ)</td>
<td>ಕಾಮಗಾರಿಗಳಿಗೆ ಗುಡ್ಡ ಅಗೆದು ಮಣ್ಣು ಸಾಗಿಸುವಾಗ ಎತ್ತರ ಪ್ರದೇಶದಲ್ಲಿ 90 ಡಿಗ್ರಿಯ ಕಡಿದಾದ ಪ್ರಪಾತವನ್ನು ನಿರ್ಮಿಸಿ ಕ್ರಮೇಣ ಶೀರೂರು ದುರಂತ ಪ್ರಕರಣದಂತೆ ಮಳೆಗಾಲದಲ್ಲಿ ಭೂಕುಸಿತ ಸಂಭವಿಸುವುದನ್ನು ತಡೆಯುವ ಬಗ್ಗೆ ಇಲಾಖೆಯಿಂದ ಏನು ಕ್ರಮ ವಹಿಸಲಾಗುತ್ತಿದೆ?</td>
<td>➢ ರಸ್ತೆ ನಿರ್ಮಾಣ ಕಾಮಗಾರಿಗಳಲ್ಲಿ ದೊರೆಯುವ ಉಪ ಖನಿಜವನ್ನು ಸದರಿ ಕಾಮಗಾರಿಗೆ ಬಳಕೆ ಮಾಡುವ ಸಂದರ್ಭಗಳಲ್ಲಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳು ಪಾವತಿಕೊಳ್ಳುವ ಸಂಬಂಧ ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ. ಆದರೆ ರಸ್ತೆಯ ರಚನೆ, ವಿನ್ಯಾಸ ಮತ್ತು ಸುರಕ್ಷತೆಯು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಾರ್ಯ ವ್ಯಾಪ್ತಿಗೆ ಸಂಬಂಧಿಸಿರುವುದಿಲ್ಲ.<br>➢ ಆದರೆ, ರಸ್ತೆ ನಿರ್ಮಾಣದಲ್ಲಿ ಅತೀ ಹೆಚ್ಚು ಎತ್ತರದ ಗುಡ್ಡಗಳನ್ನು ಕಡಿದು ರಸ್ತೆ ನಿರ್ಮಿಸುವ ಸಂದರ್ಭದಲ್ಲಿ ರಸ್ತೆ ಕಾಮಗಾರಿ ಅನುಷ್ಠಾನ ಇಲಾಖೆಗಳು ಭಾರತ ಸರ್ಕಾರದ IRC SP 48-2023 (Indian Road Congress) ರ ಅನುಸಾರ ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ.<br>➢ ಅದರಂತೆ ಸಾಧಾರಣ ಮಣ್ಣಿನಲ್ಲಿ ಅಗೆತದ ಇಳಿಜಾರನ್ನು 1:1 ರಿಂದ ½:1 ಅನುಪಾತದಲ್ಲಿ ನಿರ್ಮಿಸಲಾಗುವುದು ಹಾಗೂ ಮಣ್ಣಿನ ಗುಣ ವಿಶ್ಲೇಷಣೆಯಂತೆ ಇಳಿಜಾರಿನ ಪ್ರಮಾಣವನ್ನು ಮೆದು ಬಂಡೆಯಲ್ಲಿ ¼:1 ರಿಂದ 1/8:1 ಅನುಪಾತದಲ್ಲಿ ಹಾಗೂ ಗಟ್ಟಿಬಂಡೆ ಸ್ಥಳಗಳಲ್ಲಿ ನೇರ ಅಗೆತದಂತೆ (ಅಂದಾಜು 80-90 ಡಿಗ್ರಿ) ಕಡಿತವನ್ನು ಕೈಗೊಳ್ಳಲಾಗುವುದು.<br>➢ ಇದಲ್ಲದೆ, ಮಣ್ಣಿನ ಗುಣ ಲಕ್ಷಣ ಹಾಗೂ ಭೌಗೋಳಿಕ ಆಧಾರದಲ್ಲಿ ಅಧಿಕ ಮಳೆಯಾಗುವ ಪ್ರದೇಶಗಳಲ್ಲಿ ಹೆಚ್ಚಿನ ಸುರಕ್ಷತೆ ಕ್ರಮಗಳಾಗಿ Soil nailing, retaining wall, gabion wall, wire net roping ಮುಂತಾದ ಹೆಚ್ಚಿನ ಸುರಕ್ಷತೆ ಕಾಮಗಾರಿಗಳನ್ನು ಅವಶ್ಯಕತೆಗೆ ತಕ್ಕಂತೆ ಕೈಗೊಳ್ಳಲಾಗುವುದು.<br>➢ ಮಳೆಗಾಲದ ಪೂರ್ವದಲ್ಲಿ ಈ ರೀತಿಯ ಸ್ಥಳಗಳನ್ನು ಗುರುತಿಸಿ ಅನುದಾನದ ಲಭ್ಯತೆಯಂತೆ ಪ್ರಾಥಮಿಕ ಸುರಕ್ಷತೆ ಕ್ರಮವಾಗಿ ಮಣ್ಣಿನ ಮೂಟೆಗಳನ್ನು ಇರಿಸಿ, ಈ ರೀತಿಯ ಗುಡ್ಡ ಕುಸಿಯುವುದನ್ನು ತಡೆಗಟ್ಟಲು ಕ್ರಮ ವಹಿಸಲಾಗುವುದು. ಆದಾಗ್ಯೂ ಪ್ರಕೃತಿ ವಿಕೋಪದಂತಹ ಪ್ರಕರಣಗಳನ್ನು ಪ್ರಾಥಮಿಕವಾಗಿ ಗುರುತಿಸುವುದು ಕಷ್ಟಕರವಾಗಿದೆ.</td>
</tr>
</table>

ಸಂಖ್ಯೆ ಸಿಐ-ಎಂಎಂಎನ್/287/2024

**(ಎಸ್.ಎಸ್. ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.